# ಕಿಯೋನಿಕ್ಸ ಫ್ರ್ಯಾಂಚಾಯಿಸಿ ಸೆಂಟರ್ ರಾಯಚೂರು

## ಪ್ರಕಟಣೆ

ವಿಷಯ:- ಕಿಯೋನಿಕ್ಸ್ ಫ್ರ್ಯಾಂಚಾಯಿಸಿ ಸೆಂಟರ್ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು/ ನವೋದಯ ಮಾದರಿಯ ವಸತಿ ಶಾಲೆಗಳು/ ಏಕಲವ್ಯ ಮಾದರಿಯ ವಸತಿ ಶಾಲೆಗಳು ಹಾಗೂ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಗಳಿಗೆ ಶಿಕ್ಷಕರ ಸೇವೆ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಿಷಯವಾರು ಖಾಲಿ ಇರುವ ಹುದ್ದೆಗಳ ವಿವರಗಳನ್ನು ಈ ಕೆಳಗೆ ತೋರಿಸಿದಂತೆ ಅನುಬಂಧದಲ್ಲಿ ನಮೂದಿಸಲಾಗಿದೆ. ಇಚ್ಚೆಯುಳ್ಳ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಅಗತ್ಯ ದೃಢೀಕೃತ ದಾಖಲೆಗಳನ್ನು ಲಗತ್ತಿಸಿ ಸಲ್ಲಿಸಬೇಕು.

ಮೀಸಲಾತಿ ವಿವರ

| ಕ್ರ | ಪ್ರವರ್ಗ | ಕನ್ನಡ ಶಿಕ್ಷಕರು | ಇಂಗ್ಲೀಷ್ ಶಿಕ್ಷಕರು | ವಿಜ್ಞಾನ ಶಿಕ್ಷಕರು | ಹಿಂದಿ ಶಿಕ್ಷಕರು | ಸಮಾಜ ಶಿಕ್ಷಕರು | ಗಣಿತ ಶಿಕ್ಷಕರು | ದೈಹಿಕ ಶಿಕ್ಷಕರು | ಕಂಪ್ಯೂಟರ್ | ಸಂಗೀತ ಶಿಕ್ಷಕರು | ಕ್ರಾಫ್ಟ ಶಿಕ್ಷಕರು | ಒಟ್ಟು |
|---|---|---|---|---|---|---|---|---|---|---|---|---|
| 1 | ಪ್ರವರ್ಗ-1 | 01 | 01 | 01 | 01 | 01 | 01 | 01 | 01 | 01 | 01 | 10 |
| 2 | ಪ್ರ-2ಎ | 03 | 03 | 02 | 03 | 02 | 03 | 02 | 02 | 02 | 02 | 24 |
| 3 | ಪ್ರ-2ಬಿ | 01 | 01 | 01 | 01 | 01 | 01 | 01 | 01 | 01 | 01 | 10 |
| 4 | ಪ್ರ-3ಎ | 01 | 01 | 01 | 01 | 01 | 01 | - | - | 01 | 01 | 08 |
| 5 | ಪ್ರ-3ಬಿ | 01 | 01 | - | 01 | - | 01 | - | - | - | - | 04 |
| 6 | ಎಸ್.ಸಿ. | 03 | 03 | 03 | 04 | 03 | 03 | 03 | 02 | 03 | 03 | 30 |
| 7 | ಎಸ್.ಟಿ | 01 | 01 | 01 | 01 | 01 | 01 | 01 | 01 | 01 | 01 | 10 |
| 8 | ಸಾಮಾನ್ಯ ಅಭ್ಯರ್ಥಿ | 11 | 11 | 08 | 11 | 08 | 11 | 07 | 06 | 08 | 08 | 89 |
| | ಒಟ್ಟು | 22 | 22 | 17 | 23 | 17 | 22 | 15 | 13 | 17 | 17 | 185 |

ಪದವಿಯಲ್ಲಿ ಮತ್ತು ಬಿ.ಎಡ್. ಪದವಿಯಲ್ಲಿ ಸಾಮಾನ್ಯ ಅಭ್ಯರ್ಥಿಗಳು ಕನಿಷ್ಟ ಶೇಕಡಾ 60% ರಷ್ಟು ಹಾಗೂ ಪ.ಜಾತಿ /ಪ.ಪಂಗಡದ ಅಭ್ಯರ್ಥಿಗಳು ಕನಿಷ್ಟ ಶೇಕಡಾ 50 ಪ್ರತಿಶತ ಅಂಕಗಳನ್ನು ಪಡೆದಿರಬೇಕು. (ಸಂಗೀತ/ಕ್ರಾಫ್ಟ ಶಿಕ್ಷಕರಿಗೆ ಕನಿಷ್ಟ ಅಂಕಗಳನ್ನು ಪಡೆದಿರಬೇಕೆಂಬ ಷರತ್ತು ಅನ್ವಯಿಸುವುದಿಲ್ಲ).

ಹೆಚ್ಚಿನ ವಿವರಗಳು/ನಿಬಂಧನೆಗಳಿಗಾಗಿ ಜಿಲ್ಲಾಡಳಿತ, ರಾಯಚೂರು ಮತ್ತು ಜಿಲ್ಲಾ ಪಂಚಾಯತ ರಾಯಚೂರುನ ಅಧಿಕೃತ ವೆಬ್ ಸೈಟ್ ಅದ http://www.raichur.nic.in ಅಥವಾ http://zpraichur.kar.nic.in ಅವರ ವೆಬ್ ಸೈಟ್‌ನಲ್ಲಿ ನೋಡಬಹುದು.

ನಿಗದಿ ಪಡಿಸಿದ ನಮೂನೆಯಲ್ಲಿ ಇಲ್ಲದಿರುವ, ಕನಿಷ್ಟ ಅರ್ಹತೆಯನ್ನು ಹೊಂದಿರದ ಹಾಗೂ ದೃಢೀಕೃತ ದಾಖಲಾತಿಗಳನ್ನು ಲಗತ್ತಿಸಿರದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಮೇಲೆ ಸೂಚಿಸಿದ ವೆಬ್ ಸೈಟ್‌ಗಳಲ್ಲಿ ಮತ್ತು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ರಾಯಚೂರು ಹಾಗೂ ಕಿಯೋನಿಕ್ಸ್ ಫ್ರ್ಯಾಂಚಾಯಿಸಿ ಸೆಂಟರ್ ರಾಯಚೂರು ರವರ ಕಛೇರಿಗಳಲ್ಲಿಯು ನಿಗದಿತ ಅರ್ಜಿ ನಮೂನೆಗಳು ಉಚಿತವಾಗಿ ಲಭ್ಯವಿರುತ್ತವೆ.

ನಿಗದಿತ ನಮೂನೆಯಲ್ಲಿ ಭರ್ತಿಮಾಡಿದ ಅರ್ಜಿಗಳನ್ನು ದಿನಾಂಕ 15.05.2010 (ಶನಿವಾರ)ರ ಸಾಯಂಕಾಲ 5.00ಗಂಟೆ ಒಳಗಾಗಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ರಾಯಚೂರು ಅಥವಾ ಕಿಯೋನಿಕ್ಸ್ ಫ್ರ್ಯಾಂಚಾಯಿಸಿ, ಟ್ರೈನಿಂಗ್ ಸೆಂಟರ್ ನಂ. 12-11-49 3ನೇ ಮಹಡಿ ಅಮೀರ್ ಟ್ರೇಡಿಂಗ್ ಕಾಂಪ್ಲೆಕ್ಸ PWD ಆಫೀಸ್ ಹತ್ತಿರ ಸಾಥ ಕಛೇರಿ ಲಿಂಕ್ ರೋಡ್ ರಾಯಚೂರು ರವರಿಗೆ ಸಲ್ಲಿಸತಕ್ಕದ್ದು.

ಕೇಂದ್ರ ಮುಖ್ಯಸ್ಥರು
ಕಿಯೋನಿಕ್ಸ ಫ್ರ್ಯಾಂಚಾಯಿಸಿ ಸೆಂಟರ್ ರಾಯಚೂರು.